ಓ.ಎಸ್ : 83 / 2016

ಪಿ.ಡಬ್ಲ್ಯೂ : 01

ದಿನಾಂಕಃ 04-01-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪಾಟೀ ಸವಾಲಿಗೆ ಅನುವು ಮಾಡಿಕೊಡಲಾಯಿತು.

ಪಾಟೀ ಸವಾಲು :- 1ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ. ಎಲ್.ಎಸ್.ಯು. ರವರಿಂದ :-

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಿಕೆಯಲ್ಲಿನ ಅಂಶಗಳು ನನಗೆ ಖುದ್ದಾಗಿ ಗೊತ್ತಿರುತ್ತದೆ. ನನ್ನ ತಂದೆಯ ಹೆಸರು ಭೈರಣ್ಣ. ನನ್ನ ತಂದೆಗೆ ಒಟ್ಟು 7 ಜನ ಮಕ್ಕಳುಗಳು, ಅವರುಗಳಲ್ಲಿ 4 ಜನ ಗಂಡು ಮಕ್ಕಳುಗಳು, 3 ಜನ ಹೆಣ್ಣು ಮಕ್ಕಳುಗಳು, ಸದರಿಯವರು ಎಲ್ಲರೂ ಜೀವಂತವಿರುತ್ತಾರೆ. ಈ ದಾವೆಯಲ್ಲಿ ನನ್ನ ತಂದೆಯ ಎಲ್ಲಾ ಮಕ್ಕಳುಗಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ದಾವ ಸ್ವತ್ತಿನ ಸರ್ವೆ ನಂಬರ್ ನನಗೆ ನೆನಪಿರುವುದಿಲ್ಲ. ದಾವ ಸ್ವತ್ತು ನನ್ನ ತಂದೆಯವರ ಭಾಗಕ್ಕೆ ಬಂದಂತಹ ಸ್ವತ್ತು ಆಗಿರುತ್ತದೆ, ಆದರೆ ಯಾವಾಗ ಬಂದಿರುತ್ತದೆಂದು ನನಗೆ ಗೊತ್ತಿರುವುದಿಲ್ಲ, ನಮ್ಮ ತಂದೆಗೆ ದಾವ ಸ್ವತ್ತು ಯಾವ ರೀತಿ ಬಂದಿರುತ್ತದೆಂದು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ, ಸಾಕ್ಷಿಯು ಮುಂದುವರೆದು ದಾವ ಸ್ವತ್ತು ನನ್ನ ತಂದೆಗೆ ಟೆನೆನ್ಸಿ ಮುಖಾಂತರ ಬಂದಿರುತ್ತದೆಂದು ನುಡಿಯುತ್ತಾರೆ, ಆದರೆ ಯಾವ ವರ್ಷ ಬಂದಿರುತ್ತದೆಂದು ನನಗೆ ಗೊತ್ತಿರುವುದಿಲ್ಲ.

2. ದಾವ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ತಂದೆಯ ಹೆಸರಿಗೆ ಖಾತೆ, ಪಹಣಿ ಆದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಾಮಾನ್ಯವಾಗಿ ನಾನು ಯಾವುದೇ ದಾಖಲಾತಿಗೆ ಸಹಿ ಮಾಡುವ ಪೂರ್ವದಲ್ಲಿ ಸಂಪೂರ್ಣವಾಗಿ ಓದಿ ತಿಳಿದು ಸಹಿ ಮಾಡುತ್ತೇನೆಂದರೆ ಸರಿ. ನನ್ನ ಮಗ ವಕೀಲ ವೃತ್ತಿ ಮಾಡುತ್ತಿರುತ್ತಾರೆಂದರೆ ಸರಿ. ಒಟ್ಟು ಕುಟುಂಬದಲ್ಲಿ ನನ್ನ ತಂದೆಯ ಮತ್ತು

ಅವರ ಮಕ್ಕಳ ನಡುವೆ ವಿಭಾಗ ಆಗಿರುವುದಿಲ್ಲ. ನನ್ನ ತಂದೆಗೆ ಸೇರಿದ ಆಸ್ತಿಗಳು ಈಗಲೂ ಕೂಡ ಅವರ ಹೆಸರಿನಲ್ಲಿಯೇ ಇರುತ್ತದೆ. ನನ್ನ ತಂದೆಗೆ ಒಟ್ಟು 3-4 ಆಸ್ತಿಗಳಿದ್ದು, ಆದರೆ ಅದರ ಸರ್ವೆ ನಂಬರ್‌ಗಳು ನನಗೆ ನೆನಪಿರುವುದಿಲ್ಲ.

3. ನಿಪಿ-2 ರಲ್ಲಿ ನನ್ನ ತಂದೆಯ ಹೆಸರು ಕಂಡು ಬರುವುದಿಲ್ಲ. ನಿಪಿ-2 ರಲ್ಲಿ ಮಹದೇವಯ್ಯ ಬಿನ್ ಭೈರಣ್ಣ ಎಂದು ನಮೂದು ಆಗಿರುತ್ತದೆಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ಎಲ್ಲಾ ದಾಖಲಾತಿಗಳು ಮಹದೇವಯ್ಯನವರ ಹೆಸರಿನಲ್ಲಿರುತ್ತದೆಂದರೆ ಸರಿಯಲ್ಲ. ದಾವ ಸ್ವತ್ತಿನ ಸರ್ವೆ ನಂಬರ್ ಮತು ಚಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ದಾವ ಸ್ವತ್ತಿನಲ್ಲಿ ನಾನು ಜಂಟಿಯಾಗಿ ವ್ಯವಸಾಯ ಮಾಡುತ್ತಿದ್ದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ. ದಿನಾಂಕಃ 20-01-2015 ರಂದು ಭೈರಣ್ಣನವರ ಮಕ್ಕಳ ನಡುವೆ ನೊಂದಯಿತ ವಿಭಾಗಪತ್ರ ಆಗಿರುತ್ತದೆಂದರೆ ಸಾಕ್ಷಿಯು ಒಂದು ವಿಭಾಗಪತ್ರ ಆಗಿರುತ್ತದೆ, ಆದರೆ ದಿನಾಂಕ ನೆನಪಿರುವುದಿಲ್ಲವೆಂದು ನುಡಿಯುತ್ತಾರೆ. ದಿನಾಂಕಃ 20-01-2015 ರ ವಿಭಾಗಪತ್ರದ ಬಗ್ಗೆ ನನ್ನ ವಾದಪತ್ರದಲ್ಲಿ ನಮೂದಿಸಿರುತ್ತೇನೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ.

4. 1ನೇ ಪ್ರತಿವಾದಿ ಮಹದೇವಯ್ಯ ನನ್ನ ತಮ್ಮ, ಸದರಿಯವರು ಸಲ್ಲಿಸಿರುವ ಲಿಖಿತ ತಕರಾರನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಮ್ಮ ಪರವಾಗಿ ನಿಮ್ಮ ಮಗ ವಕೀಲರಾಗಿ ದಾವವನ್ನು ನಡೆಸುತ್ತಿದ್ದಾರೆಂದರೆ ಸರಿ. ಸಾಕ್ಷಿಗೆ ದಿಃ 22-01-2015 ರ ಜೆರಾಕ್ಸ್ ಪ್ರತಿಯಾದ ವಿಭಾಗಪತ್ರ ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲಾತಿಯನ್ನು ಒಪ್ಪಿಕೊಂಡ ಕಾರಣ ಜೆರಾಕ್ಸ್ ಪ್ರತಿಯಾದ ದಿಃ 22-01-2015 ರ ವಿಭಾಗ ಪತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿರುವ ಮಾಹಿತಿಯನ್ನು ನಾನೇ ಹೇಳಿರುತ್ತೇನೆ. ನಿಡಿ-1 ರಲ್ಲಿರುವ ಸಂಗತಿಗಳನ್ನು ಸಂಪೂರ್ಣವಾಗಿ ಓದಿ, ಓದಿಸಿ ತಿಳಿದುಕೊಂಡು ಸಹಿ

ಮಾಡಿರುತ್ತೇನೆ. ದಿಃ 22-01-2015 ರಂದು ನಿಡಿ-1 ಆದಂತಹ ಸಮಯದಲ್ಲಿ ದಾವ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿ ಇತ್ತು.

5. ತಕರಾರಿನಲ್ಲಿರುವ 1ನೇ ಐಟಂ ಸ್ವತ್ತು ಸರ್ವೆ ನಂಬರ್-6/4 ರ ವಿಸ್ತೀರ್ಣ 1 ಎಕರೆ 3 ಗುಂಟೆ ಜಮೀನು ಯಾರ ಹೆಸರಿನಲ್ಲಿರುತ್ತದೆಂದು ಗೊತ್ತಿರುವುದಿಲ್ಲ, ಸಾಕ್ಷಿಯು ಮುಂದುವರೆದು ನನ್ನ ಹೆಸರಿನಲ್ಲಿಯೂ ಇರುವುದಿಲ್ಲವೆಂದು ನುಡಿಯುತ್ತಾರೆ. ತಕರಾರಿನಲ್ಲಿರುವ 2ನೇ ಐಟಂ ಸ್ವತ್ತು ಮನೆ ನಂಬರ್-676, 4-ಸಿ ಬ್ಲಾಕ್, ಆರ್.ಆರ್.ಸಿ. ಮನೆ ನನ್ನ ಹೆಸರಿನಲ್ಲಿರುತ್ತದೆ, ಅದು ಯಾವ ವರ್ಷದಂದು ಖರೀದಿ ಮಾಡಿರುತ್ತೇನೆಂದು ನನಗೆ ನೆನಪಿರುವುದಿಲ್ಲ. ನಿಡಿ-1 ಆದಂತಹ ಪೂರ್ವದಲ್ಲಿ ತಕರಾರಿನಲ್ಲಿರುವ 2ನೇ ಐಟಂ ಸ್ವತ್ತು ಮನೆ ನಂಬರ್-676, 4-ಸಿ ಬ್ಲಾಕ್, ಆರ್.ಆರ್.ಸಿ. ಮನೆಯನ್ನು ಖರೀದಿ ಮಾಡಿರುತ್ತೇನೆಂದರೆ ಸರಿ. ತಕರಾರಿನಲ್ಲಿರುವ 1ನೇ ಐಟಂ ಸ್ವತ್ತು ಸರ್ವೆ ನಂಬರ್-6/4 ರ ವಿಸ್ತೀರ್ಣ 1 ಎಕರೆ 3 ಗುಂಟೆ ಜಮೀನು ನನ್ನ ಹೆಸರಿನಲ್ಲಿರುತ್ತದೆಂದರೆ ಸರಿಯಲ್ಲ.

6. ನಿಡಿ-1 ರಲ್ಲಿ ನಮೂದು ಆಗಿರುವ ಆಸ್ತಿಯ ಹೊರತಾಗಿ ಬೇರೆ ಯಾವ ಸ್ವತ್ತುಗಳು ನಿಮ್ಮ ಹೆಸರಿನಲ್ಲಿರುತ್ತದೆಂದರೆ ಸಾಕ್ಷಿಯು ಸರ್ವೆ ನಂಬರ್-6/2 ನನ್ನ ಹೆಸರಿನಲ್ಲಿದ್ದು, ಅದರ ಹೊರತಾಗಿ ಬೇರೆ ಆಸ್ತಿ ನನ್ನ ಹೆಸರಿನಲ್ಲಿರುವುದಿಲ್ಲ. ಸರ್ವೆ ನಂಬರ್-6/2 ನರಸೀಪುರದಲ್ಲಿರುವ ಕೇತೋಹಳ್ಳಿಯಲ್ಲಿ 1 ಎಕರೆ 3 ಗುಂಟೆ ಜಮೀನು ಇರುತ್ತದೆ. ಸದರಿ ಸ್ವತ್ತನ್ನು ಯಾವಾಗ ಖರೀದಿ ಮಾಡಿರುತ್ತೇನೆಂದು ನೆನಪಿರುವುದಿಲ್ಲ. ಸದರಿ ಸ್ವತ್ತಿನ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನಿಮಗೆ ತೊಂದರೆ ಇದೆಯಾ ಎಂದರೆ ಸಾಕ್ಷಿಯು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಸರ್ವೆ ನಂಬರ್-6/2 ರ ಸ್ವತ್ತನ್ನು ನಿಡಿ-1 ಆದಂತಹ ಪೂರ್ವದಲ್ಲಿ ಖರೀದಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ನಾನು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆಯಲ್ಲಿ ಕರ್ತವ್ಯನಲ್ಲಿದ್ದಾಗ ಖರೀದಿ ಮಾಡಿರುತ್ತೇನೆಂದು ನುಡಿಯುತ್ತಾರೆ. ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆಯಲ್ಲಿ ನಾನು 2006 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಾನು ಬಿ.ಡಬ್ಲ್ಯೂ.ಎಸ್.ಎಸ್.ಬಿ.

ಇಲಾಖೆಯಲ್ಲಿದ್ದಂತಹ ಸಂದರ್ಭದಲ್ಲಿ ನನ್ನ ಸ್ವತ್ತುಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡಿರುತ್ತೇನೋ ಇಲ್ಲವೋ ನನಗೆ ನೆನಪಿರುವುದಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ 1ನೇ ಪ್ರತಿವಾದಿಯ ಪರ ವಕೀಲರಿಗೆ ಸಮಯ ನೀಡಲಾಯಿತು.

ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,

ಅ. ಸಿ. ಜ ಮತ್ತು ಜೆ. ಎಂ. ಎಫ್. ಸಿ, ಮಾಗಡಿ.